<table>
<tr><td colspan="4">ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ.564/2018</td></tr>
<tr><td></td><td>ಸಿ.ಡಬ್ಲ್ಯೂ</td><td>10</td></tr>
<tr><td></td><td>ಪಿ.ಡಬ್ಲ್ಯೂ</td><td>4</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಸಮೀ ಉಲ್ಲಾ ಬಿನ್ ಅಬ್ದುಲ್ ಮಾಲೀಕ್</td></tr>
<tr><td>ವಯಸ್ಸು</td><td colspan="3">38 ವರ್ಷ</td></tr>
<tr><td>ಉದ್ಯೋಗ</td><td colspan="3">ಖಾಸಗಿ ಕೆಲಸ</td></tr>
<tr><td>ವಾಸಸ್ಥಳ</td><td colspan="3">ಮಂಡ್ಯ</td></tr>
</table>

ದಿನಾಂಕಃ **07.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು ನನ್ನ ವಾಹನದಲ್ಲಿ ಮಂಡ್ಯದಿಂದ ಕೋಲಾರದ ಕಡೆಗೆ ಹೋಗುತ್ತಿದ್ದೇನು ಆ ವೇಳೆಗೆ ಎದುರಿನಿಂದ ಅಂದರೆ ಬೆಂಗಳೂರು ಕಡೆಯಿಂದ ಬಂದ ಟ್ಯಾಂಕರ್ ವಾಹನವು ಡಿವೈಡರ್ ಹತ್ತಿ ಬಂದು ನಾವು ಹೋಗುತ್ತಿದ್ದ ಲಾರಿಗೆ ಡಿಕ್ಕಿಪಡಿಸಿತ್ತು. ನಮ್ಮ ಲಾರಿಯನ್ನು ಸಿದ್ದಾಪ್ಪಾಜಿ ಚಾಲನೆ ಮಾಡುತ್ತಿದ್ದನು. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ದಿ.**11.05.2018** ರಂದು ಮಧ್ಯ ರಾತ್ರಿ **2-30** ರ ಸಮಯದಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನು ನನ್ನ ಮಾಲೀಕತ್ವಕ್ಕೆ ಸೇರಿದ ಲಾರಿಯನ್ನು ಚನ್ನಪಟ್ಟಣ ತಾಲ್ಲೂಕಿನ ವಂದಾರಗುಪ್ಪೆ ಬಳಿ ಇರುವ ಮುಖ್ಯ ರಸ್ತೆಯ ಬಳಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದುರಿನಿಂದ ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದ ಕೆಎಲ್**-17-**ಬಿ**-0607** ನೇದರ ಟ್ಯಾಂಕರ್ ಗಾಡಿಗೆ ಅಪಘಾತಪಡಿಸಿದ್ದನು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಟ್ಯಾಂಕರ್ ಗಾಡಿಗೆ ಆರೋಪಿತನು ಚಾಲನೆ ಮಾಡುತ್ತಿದ್ದ ಲಾರಿಗೆ ಡಿಕ್ಕಿಪಡಿಸಿದ್ದಾಗಿ ನುಡಿಯುತ್ತಾನೆ. ಸದರಿ

ಅಪಘಾತದಿಂದಾಗಿ ಟ್ಯಾಂಕರ್ ವಾಹನದ ಚಾಲಕನಾದ ಮೋಹನ್ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ನಾನು ದಿ **16.05.2018** ರಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಆರೋಪಿತನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ಪಾಟೀ ಸವಾಲುಃ** ಆರೋಪಿ ಪರ ಶ್ರೀ.ಎಚ್ ಎಸ್ ಎ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.